ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ರಾಜರಾಜೇಶ್ವರಿ ನಗರ ವಲಯ, ಬೆಂಗಳೂರು

ಸಂಖ್ಯೆ.ಜಂಆ/ರಾ.ರಾ.ನ/ಆ.ಮಂ/2247/2013-14

ಜಂಟಿ ಆಯುಕ್ತರ ಕಛೇರಿ
ದಿನಾಂಕ:17.09.2013

ಆಡಳಿತಾತ್ಮಕ ಮಂಜೂರಾತಿ

ಕಾರ್ಯಪಾಲಕ ಅಭಿಯಂತರರು (ರಾರಾನ) ವಿಭಾಗ ರವರು ಸಲ್ಲಿಸಿರುವ ಅಂದಾಜು ಪಟ್ಟಿಯ ಮೊತ್ತ ರೂ.49.90(ರೂ. ನಲವತ್ತೊಂಭತ್ತು ಲಕ್ಷ ತೊಂಭತ್ತು ಸಾವಿರ ಮಾತ್ರ)ಗಳಿಗೆ 2013-14ನೇ ಸಾಲಿನ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು ವೃತ್ತ, ಬೆಂಗಳೂರು ರವರ ದರಪಟ್ಟಿಯ ದರದಂತೆ ಆಡಳಿತಾತ್ಮಕ ಮಂಜೂರಾತಿ ನೀಡಿದೆ. 2013-14ನೇ ಸಾಲಿನ ಕ್ರಿಯಾ ಯೋಜನೆಯ ಕಾಮಗಾರಿಯಾಗಿರುತ್ತದೆ.

ಕಾಮಗಾರಿಯ ವಿವರ: Detailed Estimate for providing and laying HDPE water line in Chanappa Garden and Sundara nagara Block-1 in J.P.Park in Ward No.17 ವಲಯ ಕಛೇರಿಯ ಆಡಳಿತಾತ್ಮಕ ಮಂಜೂರಾತಿ ವಹಿಯಲ್ಲಿ ನಮೂದಿಸಲಾಗಿರುವ ಸಂಖ್ಯೆ: ಪುಟಸಂಖ್ಯೆ: 238 ಮತ್ತು 239 ಕ್ರ.ಸಂ.ಸಂಖ್ಯೆ: 2247ರಲ್ಲಿ ನೋಂದಾಯಿಸಿದೆ.

ಈ ಕೆಳಗಿನ ಷರತ್ತುಗೊಳಪಟ್ಟು ಅನುಷ್ಠಾನಗೊಳಿಸುವುದು:

1. ಅಂಕಿ ಅಂಶಗಳನ್ನು ಪರಿಶೀಲಿಸುವುದು ಹಾಗೂ ದರ ಪಟ್ಟಿಯಲ್ಲಿರದ ಅಂಶಗಳಿಗೆ ಸೂಕ್ತ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು.
2. ದರ ಪಟ್ಟಿಯನ್ನು ಮಾರುಕಟ್ಟೆ ದರಗಳೊಂದಿಗೆ ಹೋಲಿಕೆ ಮಾಡಿ ಸೂಕ್ತ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು
3. ಕಾಮಗಾರಿ ನಿರ್ವಹಿಸಲು ಉತ್ತಮ ಗುಣಮಟ್ಟದ ಸಾಮಗ್ರಿಗಳನ್ನು ಉಪಯೋಗಿಸುವುದು ತಪ್ಪಿದ್ದಲ್ಲಿ ನೀವೇ ಪೂರ್ಣ ಹೊಣೆಗಾರರಾಗಿರುತ್ತೀರೆಂದು ತಿಳಿಸಲಾಗಿದೆ.
4. ಮಂಜೂರಾದ ಅಂದಾಜು ಪಟ್ಟಿ ಪ್ರಮಾಣಕ್ಕಿಂತ ಹೆಚ್ಚಿಗೆ ಕೆಲಸ ನಿರ್ವಹಿಸಿದ್ದಲ್ಲಿ ಸೂಕ್ತ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು.
5. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕ್ರಮ ವಹಿಸುವುದು. ಇಲ್ಲವಾದಲ್ಲಿ ನೀವೇ ನೇರ ಹೊಣೆಗಾರರಾಗಿರುತ್ತೀರೆಂದು ಈ ಮೂಲಕ ತಿಳಿಯುವುದು.

ಜಂಟಿ ಆಯುಕ್ತರು
ರಾಜರಾಜೇಶ್ವರಿ ನಗರ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ:
1)ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ, ರಾ.ರಾ.ನಗರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
2)ಕಾರ್ಯಪಾಲಕ ಅಭಿಯಂತರರು (ಗುಣ ನಿಯಂತ್ರಣ) ವಿಭಾಗ ರವರ ಮಾಹಿತಿಗಾಗಿ.
3)ಲೆಕ್ಕ ಅಧೀಕ್ಷಕರು, ರಾ.ರಾ. ನಗರ ವಲಯ ರವರ ಮಾಹಿತಿಗಾಗಿ.
4)ಕಾರ್ಯಪಾಲಕ ಅಭಿಯಂತರರು, (ರಾರಾನ) ರವರ ಅಗತ್ಯ ಕ್ರಮಕ್ಕಾಗಿ.
5)ಕಛೇರಿ ಪ್ರತಿ.

Scanned by CamScanner